

ದೂರೀಕರಣವೂ ಕಾರಣವಾಗಿದ್ದಿರಬಹುದು. ನಿರಂಜನರ ಮನೆಯ ಹಿಂಭಾಗದಲ್ಲಿಯೇ ಇದ್ದ ತಮ್ಮ ಸ್ವಂತದ ಮನೆಯಲ್ಲಿ ಟಿಡಿಎಸ್ ವಾಸಿಸುತ್ತಿದ್ದರು. ದಿನಾಲು ಎರಡು ಸಲ ನಿರಂಜನರ ಮನೆಯ ಹಿಂಬದಿಯ ದಾರಿಯಿಂದಲೇ ಅವರು ತಮ್ಮ ಅಂಗಡಿಗೆ ಬರುತ್ತಿದ್ದುದನ್ನು ನಾನು ನೋಡಿದ್ದೇನೆ. 1958ರಿಂದಲೇ ಧಾರವಾಡದಲ್ಲಿ ನೆಲೆಸಿದ್ದರೂ ಸ್ವತಃ ನಿರಂಜನರು ಎಲ್ಲಿಯೂ ಹೊರಗೆ ಹೋಗುತ್ತಿರಲಿಲ್ಲ. ಯಾವ ಕಾರ್ಯಕ್ರಮದಲ್ಲಿಯೂ ಪಾಲುಗೊಳ್ಳುತ್ತಿರಲಿಲ್ಲ. ಬಹುಶಃ ಪಂಚಾಕ್ಷರಿಯವರ ಒತ್ತಾಯದ ಮೇರೆಗೆ, ನಮ್ಮ ಕರ್ನಾಟಕ ಕಾಲೇಜಿಗೆ ಬಂದ ಕಾರ್ಯಕ್ರಮವೇ ಕೊನೆಯದು ಆಗಿದ್ದಿರಬಹುದು. ಆಗ ಧಾರವಾಡದಲ್ಲಿ ಇದ್ದ ಒಂದೇ ಒಂದು ಪ್ರಮುಖ ಸುಭಾಸ ರಸ್ತೆಯಲ್ಲಿ, ಅಥವಾ ಪೇಟೆಯಲ್ಲಿ ಸಹ ಕಾಣಿಸಿಕೊಂಡಿರಲಿಲ್ಲ. ಅನೇಕ ಉಪಕರಣಗಳನ್ನು, ಸಾಧನ ಸಲಕರಣೆಗಳನ್ನು ಕೊಂಡು ತಂದು ಅನುಪಮಾ ಅವರು ಆರಂಭಿಸಿದ ಸುಸಜ್ಜಿತ ಆಸ್ಪತ್ರೆಯ ಆರಂಭೋತ್ಸವದ ಸುದ್ದಿ ಸಹ ಹೆಚ್ಚು ಸದ್ದು ಮಾಡಲಿಲ್ಲ. ಧಾರವಾಡಿಗರ ನಿಧಾನ-ಬುದ್ಧಿಯ